# ಶ್ರೀ ರಘೂತ್ತಮತೀರ್ಥರು

## (ಭಾವಬೋಧಕಾರರು)




**ಭಾವಬೋಧಕೃತಂ ಸೇವೆ ರಘೂತ್ತಮಮಹಾಗುರುಮ್ ।**
**ಯಚ್ಛಿಷ್ಯ ಶಿಷ್ಯ ಶಿಷ್ಯಾದ್ಯಾಃ ಟಿಪ್ಪಣ್ಣಾಚಾರ್ಯ ಸಂಜ್ಞಿತಾಃ ॥**

ಯಾರ ಶಿಷ್ಯ, ಪ್ರಶಿಷ್ಯರೇ ಮೊದಲಾದವರೂ ಕೂಡ ಟಿಪ್ಪಣಾ–ಚಾರ್ಯರೆಂದು ಪ್ರಸಿದ್ಧರಾಗಿರುವರೊ ಅಂತಹ ಮಹಾಮಹಿಮರಾದ, ಭಾವಬೋಧ ಟಿಪ್ಪಣಿಗಳನ್ನು ರಚಿಸಿರುವ, ರಘೂತ್ತಮತೀರ್ಥರನ್ನು ಆಶ್ರಯಿಸುತ್ತೇನೆ.

**ಪ್ರಣಮತ್ಕಾಮಧೇನೂಂ ಚ ಭಜತ್ಸುರತರೂಪಮಮ್ ।**
**ಶ್ರೀ ಭಾವಬೋಧ ಕೃತ್ಪಾದ ಚಿಂತಾಮಣಿಮುಪಾಸ್ಮಹೇ ॥**

ನಮಿಸುವವರಿಗೆ ಕಾಮಧೇನುಗಳಾದ, ಭಜಿಸುವವರಿಗೆ ಕಲ್ಪವೃಕ್ಷ–ರಾದ, ಆಚಾರ್ಯ ಭಾವನೆಗಳನ್ನು ತಿಳಿದು ವಿಶದವಾದ ಟಿಪ್ಪಣಿಗಳನ್ನು ರಚಿಸಿದ, ಚಿಂತಾಮಣಿಯಂತಿರುವ, ರಘೂತ್ತಮತೀರ್ಥರನ್ನು ಉಪಾಸಿಸುವೆ.

ಶ್ರೀವ್ಯಾಸರಾಜರ ತಾತ್ಪರ್ಯಚಂದ್ರಿಕಾಗ್ರಂಥದ ಹಿರಿಮೆಯನ್ನು ಮೊದಲ ಬಾರಿಗೆ ಗುರುತಿಸಿ, ಅದನ್ನು ತಮ್ಮ ತತ್ತ್ವಪ್ರಕಾಶಿಕಾ ಭಾವಬೋಧದಲ್ಲಿ ಉಲ್ಲೇಖಿಸಿರುವ ಮೂಲಕ ಅದರ ಮಹತ್ವದ ಅರಿವು ವಿದ್ವತ್ಪ್ರಪಂಚಕ್ಕೆ ಆಗಲು ಕಾರಣರಾದವರಲ್ಲಿ ಪ್ರಥಮರು ಎಂಬುದೂ ಸಹ ಅವರ ವೈಶಿಷ್ಟ್ಯ. ಚಂದ್ರಿಕೆಯನ್ನು ಉಲ್ಲೇಖಿಸುತ್ತಲೇ ಸೂತ್ರ, ಭಾಷ್ಯ ಹಾಗೂ ಟೀಕೆಗಳ ಚಿಂತನೆಯ ಬಗ್ಗೆ ಹೊಸ ಚಿಂತನೆಗಳನ್ನು ನೀಡಿದ್ದು ಇವರ ಮತ್ತೊಂದು ಸಾಧನೆ.



*ರಘೂತ್ತಮರಿಂದ ಶ್ರೀರಂಗದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಪ್ರಾಣದೇವರು*

**ರಘೋತ್ತಮಗುರುರ್ಬೂಯಾನ್ಮಮ ಜ್ಞಾನಾಯ ಸರ್ವದಾ ।**
**ಶ್ರೀಮಧ್ವಶಾಸ್ತ್ರಂ ಸಂಶೋಧ್ಯ ಯಃ ಸಮ್ಯಜ್ಞಾನಮಾಪ್ತವಾನ್ ॥**
**ರಘೂತ್ತಮಮುನೀನ್ ವಿದ್ಯಾಗುರೂನ್ ಪರಗುರೂಂಸ್ತಥಾ ।**
**ವಂದೇ ಶ್ರೀಮಧ್ವಶಾಸ್ತ್ರೋತ್ಥವಿನಿರ್ಮಲಮತೀನಹಂ ॥**
**ರಘೂತ್ತಮಗುರುರ್ದದ್ಯಾತ್ ರಘೂತ್ತಮಕಥಾದರಮ್ ।**
**ರಘೂತ್ತಮಗ್ರಂಥಜಾತರಘೂತ್ತಮಕಥಾದೃತಃ**

ಇವರ ಕಾಲ – **1557-1596**

ಗುರುಗಳು – ಶ್ರೀ ರಘುವರ್ಯತೀರ್ಥರು

ವಿದ್ಯಾಗುರುಗಳು – ಶ್ರೀವರದಾಚಾರ್ಯರು

ಶಿಷ್ಯರು – ಶ್ರೀವೇದವ್ಯಾಸತೀರ್ಥರು, ಶ್ರೀರಘುಪತಿತೀರ್ಥರು **(ಚಿಕ್ಕ ವಯಸ್ಸಿನಲ್ಲಿಯೇ ವೈಕುಂಠ ಯಾತ್ರೆಯನ್ನು ಮಾಡಿದರು)** ಶ್ರೀವೇದೇಶತೀರ್ಥರು, ತರಂಗಿಣೀ ರಾಮಾಚಾರ್ಯರು, ರೊಟ್ಟಿವೇಂಕಟಾದ್ರಿಭಟ್ಟರು, ಆನಂದ ಭಟ್ಟಾರಕರು

**ವೃಂದಾವನ – ತಿರುಕೋಯಿಲೂರು (ಪಿನಾಕಿ ನದಿ ಸಮೀಪ)**

**ಪೂರ್ವಾಶ್ರಮ ನಾಮ – ರಾಮಾಚಾರ್ಯ**

**ಜನಕರು – ತಂದೆ – ಸುಬ್ಬಾಭಟ್ಟ, ತಾಯಿ – ಗಂಗಾಬಾಯಿ**

**ಉಪನಯನ – ಐದನೇ ವಯಸ್ಸಿನಲ್ಲಿ**

**ಹೊಸವ್ಯವಸ್ಥೆಗಳು** – ಈ ಮುಂಚೆ ಸನ್ಯಾಸಿಗಳು ಭೋಜನಕ್ಕೆಂದು ಭಿಕ್ಷೆಗೆ ತೆರಳಿ, ಅದರಿಂದ ಲಭಿಸುವ ಅನ್ನದಿಂದಲೇ ಜೀವನ ನಿರ್ವಹಣೆ ಸಾಗಬೇಕಿತ್ತು. ಶ್ರೀ ರಘೋತ್ತಮರು ಅದನ್ನು ಸಂಪೂರ್ಣ ಬದಲಾಯಿಸಿ, ಮಠದಲ್ಲಿ ತಮ್ಮ ಭೋಜನಕ್ಕೆಂದು ಪ್ರತ್ಯೇಕ ಅಡುಗೆಯ ವ್ಯವಸ್ಥೆಯನ್ನು ಪ್ರಾರಂಭಿಸಿದರು. ಭಿಕ್ಷೆಯ ವ್ಯವಸ್ಥೆ ಯಾರದೇ ಇದ್ದರೂ, ಪಾಕಕಾರ್ಯ ಮಠದಿಂದಲೇ ಆಗಬೇಕು, ಅದನ್ನು ಭಗವಂತನಿಗೆ ನಿವೇದಿಸಿ, ಪ್ರಸಾದವನ್ನು ಸ್ವೀಕರಿಸಬೇಕು. ಮತ್ತೊಬ್ಬರಿಂದ ಸಿದ್ಧವಾದ ಆಹಾರವನ್ನು ಸರ್ವಾತ್ಮನಾ ತೊರೆಯಬೇಕು ಎಂಬ ಪದ್ಧತಿಯನ್ನು ಆರಂಭಿಸಿದರು.

ಸಂಚಾರಕ್ರಮದಲ್ಲೂ ಗಮನಾರ್ಹ ಬದಲಾವಣೆಯನ್ನು ಅಳವಡಿಸಿದರು. ಅಲ್ಲಿಯವರೆಗೂ ಸ್ವತ: ಪೀಠಾಧೀಶರೇ ದೇವರ ಪೆಟ್ಟಿಗೆಯನ್ನು ಭುಜದ

ಮೇಲಿರಿಸಿಕೊಂಡು ಕೈಲಿ ದಂಡ ಹಿಡಿದು, ಕಾಲ್ನಡಿಗೆಯಲ್ಲಿ ಸಂಚರಿಸುವ ರೂಡಿಯಿತ್ತು. ರಘೂತ್ತಮರು ಸಂಚಾರಕ್ಕೆ ಆನೆ, ಕುದುರೆ, ಮೇನೆಗಳನ್ನು ಏರ್ಪಡಿಸಿದರು. ವಂದಿಮಾಗಧರು ಬಿರುದುಬಾವಲಿಗಳನ್ನು ಹಾಡುತ್ತಾ, ಮುಂದೆ ತೆರಳುವಂತೆ ಮಾಡಿದರು

## ಗ್ರಂಥರಚನೆ –

### ೧. ತತ್ತ್ವಪ್ರಕಾಶಿಕಾಭಾವಬೋಧ –

ಶ್ರೀ ಜಯತೀರ್ಥರ ತತ್ತ್ವಪ್ರಾಕಾಶಿಕೆಗೆ ರಚಿತವಾಗಿರುವ ಟಿಪ್ಪಣೀಗ್ರಂಥ. ಇದರಲ್ಲಿ ಶ್ರೀರಘೋತ್ತಮರು ಸುಮಾರು ೫೦ ಅಪೂರ್ವ ಪ್ರಮಾಣ ಶ್ಲೋಕಗಳನ್ನು ಉಲ್ಲೇಖಿಸಿದ್ದಾರೆ.

**ಪ್ರಣಮ್ಯ ಕಲ್ಯಾಣಗುಣಂ ರಮೇಶಮ–**
**ಗಾಧಬೋಧಂ ಜಯಯೋಗಿವರ್ಯಮ್ ।**
**ಗುರೋರ್ಗುರುಂ ಗುರುಮಾರ್ಯಂಶ್ಚ**
**ತತ್ತ್ವಪ್ರಕಾಶಿಕಾಭಾವಮಹಂ ಪ್ರವಕ್ಷ್ಯೇ॥ಆದಿ॥**
ರಘುವರ್ಯಗುರುಪ್ರೋಕ್ತೋ ಭಾವೋ ಜಯಮುನೇರ್ಮಯಾ ।
ಲಿಖಿತೋಮಂದಬೋಧಾರ್ಥಂ ಪ್ರೀಯತಾಂ ಶ್ರೀಪತಿಸ್ತತಃ॥ಅಂತ್ಯ॥

### ೨.ಬೃಹದಾರಣ್ಯಕೋಪನಿಷದ್ಭಾಷ್ಯಭಾವಭೋಧ –

ಬೃಹದಾರಣ್ಯಭಾಷ್ಯಕ್ಕೆ ರಚಿಸಿರುವ ವಿಸ್ತೃತವಾದ ಟೀಕೆ
ಲಕ್ಷ್ಮೀಃಪತಿಂ ಸುಖಮುಖ್ಯೈರಖಿಲೈರ್ಗುಣೌಘೈಃ
ಪೂರ್ಣಂ ವ್ಯಪೇತನಿಖಿಲಾಘಮಚಿಂತ್ಯಶಕ್ತಿಮ್ ।

ಪ್ರಾಣಾದಿಸರ್ವಜಗತೋ ಜನಿಪೂರ್ವಹೇತುಂ
ಮೋಕ್ಷೈಕಹೇತುಮನಿಶಮ್ ಪ್ರಣಮಾಮಿ ವಿಷ್ಣುಮ್ ॥ಆದಿ ।
ಬೃಹದಾರಣ್ಯಭಾಷ್ಯಸ್ಯ ವಿವೃತಿರ್ಯಾ ಕೃತಾ ಮಯಾ ।
ತಜ್ಜನ್ಯಪುಣ್ಯಮಖಿಲಮವಾಪ್ನೋತು ಗುರುರ್ಮಮ । ಅಂತ್ಯ ।

## ೩.ವಿಷ್ಣುತತ್ತ್ವನಿರ್ಣಯ ಟೀಕಾ ಭಾವಬೋಧ –

ವಿಷ್ಣುತತ್ತ್ವನಿರ್ಣಯದ ಮೇಲೆ ರಚಿತವಾಗಿರುವ ಟಿಪ್ಪಣಿ.

ನತ್ವಾ ಲಕ್ಷ್ಮ್ಯಾಃ ಪತಿಮಾನಂದತೀರ್ಥಂ ತಥಾ
ಜಯಾರ್ಯಂ ಪರಮಂ ಗುರುಂ ಚ ।
ಗುರುಂ ಚ ಮೇ ಜಯತೀರ್ಥೀಯಭಾವಂ
ವಕ್ಷ್ಯೇ ವಿಷ್ಣುಪ್ರೀತಯೇऽಹಂ ಸ್ವಶಕ್ತ್ಯಾ ॥ ಆದಿಶ್ಲೋಕ ।

## ೪.ಗೀತಾಭಾಷ್ಯಪ್ರಮೇಯದೀಪಿಕಾ ಭಾವಬೋಧ –

ಶ್ರೀಮಧ್ವಾಚಾರ್ಯರ ಗೀತಾಭಾಷ್ಯ ಕೃತಿಗೆ ರಚಿತವಾಗಿರುವ ಜಯತೀರ್ಥರ ಟೀಕೆ ಪ್ರಮೇಯದೀಪಿಕ. ಅದರ ಮೇಲೆ ಇಂದು ಉಪಲಭ್ಧವಿರುವ ಅತ್ಯಂತ ಪ್ರಾಚೀನ ಟಿಪ್ಪಣಿ ಶ್ರೀ ರಘೋತ್ತಮತೀರ್ಥರ ಈ ಭಾವಬೋಧ.

**ನತ್ವಾ ಶ್ರೀಶಂ ಮಧ್ವಮುನಿಂ ಜಯಾರ್ಯಂ**
**ಗುರೋರ್ಗುರುಂ ಗುರುಮಪ್ಯಾದರೇಣ ।**
**ಶ್ರೀಮದ್ಗೀತಾಭಾಷ್ಯಟೀಕಾಸುಭಾವಂ ವಕ್ಷ್ಯೇ**
**ಶಕ್ತ್ಯಾ ಗುರುಶಿಕ್ಷಾನುಸಾರಾತ್ । ಆದಿಶ್ಲೋಕ ।**

## ೫.ಸನ್ನ್ಯಾಯವಿವೃತಿ ಭಾವಬೋಧ –

ಶ್ರೀಮದಾಚಾರ್ಯರ ನ್ಯಾಯವಿವರಣ ಕೃತಿಯಮೇಲೆ ಶ್ರೀ ಜಯತೀರ್ಥರು ಟೀಕೆಯನ್ನು ರಚಿಸಿದ್ದರೂ, ಅದು ಸಮಗ್ರವಾಗಿಲ್ಲ. ಅದು ಉಪಲಬ್ಧವಿರುವುದು ಮೊದಲ ಅಧ್ಯಾಯದ ಮೊದಲ ಎರಡುಪಾದ ಮತ್ತು ಮೂರನೆ ಪಾದ ಆರಂಭದ ಹದಿನಾಲ್ಕು ಅಧಿಕರಣಗಳಿಗೆ ಮಾತ್ರ. ಜಯತೀರ್ಥರ ಹದಿನೆಂಟು ಟೀಕಾಗ್ರಂಥಗಳಲ್ಲಿ ಅಪೂರ್ಣವಾಗಿರುವ ಕೃತಿ ಇದೊಂದೇ. ಅದರ ಉಳಿದ ಭಾಗವನ್ನು ಪೂರ್ಣಗೊಳಿಸಿದ ಶ್ರೇಯಸ್ಸು ಶ್ರೀರಘೋತ್ತಮತೀರ್ಥರದ್ದು.

ಗುಣಾದಿಸದ್ರತ್ನಯುತಂ ಕ್ಷಯಾದಿ–
ದೋಷೋಜ್ಝಿತಂ ವೇದನದೀಭಿರಾಪ್ಯಮ್।
ಕೃಪಾಪಯಸ್ಕಂ ಹರಿದುಗ್ಧವಾರ್ಧಿಶ್ರಯೇ
ಸ್ವಪಾದಪ್ಲವಮುಕ್ತಗಮ್ಯಮ್। ಆದಿ।

ತತ್ತ್ವಪ್ರಾಕಾಶಿಕಾಸಂಸ್ಥೋ ಮಯಾ ಅನುಗ್ರಹತೋ ಹರೇ ।
ಸನ್ನ್ಯಾಯವಿವೃತೇರ್ಭಾವೋಬಾಲಬೋಧಾರ್ಥಮುದ್ಧೃತ:॥ ।ಅಂತ್ಯ।

## ೬. ಅನುವ್ಯಾಖ್ಯಾನ ನ್ಯಾಯಮಾಲ ಬ್ರಹ್ಮಸೂತ್ರ ಸಂಬಂಧಪ್ರದೀಪ

ನಮಾಮಿ ತರ್ಕಾಭಯಬಾಣಚಾಪಪಾಣೀ
ಸದಾ ಮಧ್ವಕಾರಾಭಿಪೂಜ್ಯೌ ।
ಶ್ರೀವ್ಯಾಸರಾಮೌ ಜಯಸನ್ಮುನೀಂದ್ರ–
ವಂದ್ಯಾವಲಂ ಮದ್ಗುರುಮಾನಸಸ್ಥೌ॥ಆದಿ ।

ಸುವರ್ಣಸೂತ್ರವಿಲಸ್ಯಾಖ್ಯಯರತ್ನಬಿಭೂಷಿತಾಮ್ ।
ತ್ರಯೀಹರಿಪ್ರಿಯಾಂದ್ರಷ್ಟುಮ್ ಪ್ರದೀಪೋಽಯಂ ನಿರೂಪಿತಃ॥ಅಂತ್ಯ।

## ೭.ವಿವರಣೋದ್ಧಾರಃ

### ೮.ತಾರತಮ್ಯಸ್ತೋತ್ರಮ್

ಸರ್ವೋತ್ತಮೋ ವಿಷ್ಣುರಥ ಶ್ರೀಸ್ತತೋ ಬ್ರಹ್ಮಮಾರುತೌ ।
ಅಥ ವಾಣೀ ಭಾರತೀ ಚ ತತಃ ಶೇಷವಿಪೇಸ್ವರಾಃ ॥ಆದಿಶ್ಲೋಕ।

ಇತ್ಯೇತತ್ ತಾರತಮ್ಯಂ ಯೋ ಜಾನೀಯದಥವ ಪಠೇತ್ ।
ತಸ್ಮೈಶ್ರದ್ದಧತೇ ವಿಷ್ಣುಃಪ್ರೀಯತೇ ಭಗವಾನ್ ಪರಃ।ಅಂತ್ಯಶ್ಲೋಕ ।

**೯.ತಿಥಿತ್ರಯವಿನಿರ್ಣಯ** - ಏಕಾದಶಿ ವೃತದ ಬಗ್ಗೆ ವಿವರಗಳನ್ನು ಕೃಷ್ಣಾಮೃತಮಹಾರ್ಣವ ಮತ್ತು ಶ್ರೀಕೃಷ್ಣಜಯಂತಿಯ ಬಗ್ಗೆ ಜಯಂತೀಕಲ್ಪ ಎಂಬ ಗ್ರಂಥಗಳನ್ನು ಶ್ರೀಮದಾಚಾರ್ಯರು ನೀಡಿದರು. ಅದರಲ್ಲಿ ದಶಮೀ, ಏಕಾದಶಿ, ದ್ವಾದಶಿ ದಿನತ್ರಯಗಳ ಬಗ್ಗೆ ಅಪೂರ್ವ ಮಾಹಿತಿಯನ್ನು ನೀಡಿದ್ದಾರೆ.

**ನತ್ವಾ ಶ್ರೀರಘುವರ್ಯಾಣಾಂ ಪಾದಪದ್ಮಯುಗಂ ತಥಾ ।**
**ಕರಿಷ್ಯೇ ಸುಖಬೋಧಾಯ ತಿಥಿತ್ರಯವಿನಿರ್ಣಯಮ್ ॥**

**೧೦.ಶ್ರವಣದ್ವಾದಶೀನಿರ್ಣಯ**: – ಶ್ರವಣೋಪವಾಸವು ಸರ್ವರಿಗೂ ಉಪೋಷ್ಯವಾದ ಶ್ರವಣದ್ವಾದಶಿ ಮತ್ತು ವಿಷ್ಣುಪಂಚಕ ಮಾಡುವವರಿಗೆ ಶ್ರವಣ ಮೊದಲಾದ ಬಗ್ಗೆ ನಿರ್ಣಯ ಗ್ರಂಥ.

ಶ್ರೀವ್ಯಾಸರಾಜರ ತಾತ್ಪರ್ಯಚಂದ್ರಿಕಾಗ್ರಂಥದ ಹಿರಿಮೆಯನ್ನು ಮೊದಲ ಬಾರಿಗೆ ಗುರುತಿಸಿ, ಅದನ್ನು ತಮ್ಮ ತತ್ತ್ವಪ್ರಕಾಶಿಕಾಭಾವಬೋಧದಲ್ಲಿ ಉಲ್ಲೇಖಿಸಿರುವ ಮೂಲಕ ಅದರ ಮಹತ್ವದ ಅರಿವು ವಿದ್ವತ್ಪ್ರಪಂಚಕ್ಕೆ ಆಗಲು ಕಾರಣರಾದವರಲ್ಲಿ ಪ್ರಥಮರು ಎಂಬುದೂ ಸಹ ಅವರ ವೈಶಿಷ್ಟ್ಯ. ಚಂದ್ರಿಕೆಯನ್ನು ಉಲ್ಲೇಖಿಸುತ್ತಲೇ ಸೂತ್ರ, ಭಾಷ್ಯ ಹಾಗೂ ಟೀಕೆಗಳ ಚಿಂತನೆಯ ಬಗ್ಗೆ ಹೊಸ ಹೊಳವುಗಳನ್ನು ನೀಡಿದ್ದು ಇವರ ಮತ್ತೊಂದು ಸಾಧನೆ.

**ಮಹಿಮೆಗಳು –**

೧. ಯುದ್ಧದಲ್ಲಿ ಪರಾಭವಗೊಂಡು ರಾಜ್ಯಭ್ರಷ್ಟನಾದ ಹಿಂದೂ ಮಾಂಡಲಿಕನೊಬ್ಬ ಇವರ ಮಂತ್ರಾಕ್ಷತೆಯಿಂದಾಗಿ ಪುನ: ಜಯಶೀಲನಾಗಿ ರಾಜ್ಯವನ್ನು ಹೊಂದಿದ.

೨. ಆನೆಗೊಂದಿ ಪ್ರಾಂತ್ಯದಲ್ಲಿ ಹುಟ್ಟುಮೂಕನಾದ ಅಂಬಿಗನೊಬ್ಬನು ಪ್ರಾರ್ಥಿಸಿಕೊಂಡಾಗ ಅವನಿಗೆ ಕಮಂಡಲೋದಕವನ್ನು ನೀಡಿ, ಆ ಮೂಲಕ ಮಾತು ಬರುವಂತೆ ಅನುಗ್ರಹಿಸಿದರು. ಇಂದಿಗೂ ಅವರ ವೃಂದಾವನದ ಬಳಿ ಭಕ್ತಿಯಿಂದ ಸೇವಿಸಿ, ಮೂಕತ್ವ ಕಳೆದುಕೊಂಡ ಜನರ ಸಂಖ್ಯೆ ಗಣನೀಯವಾಗಿಯೇ ಇದೆ.

೩. ಒಮ್ಮೆ ಗೃಹಸ್ಥನೊಬ್ಬ ತನ್ನ ವಿಚಿತ್ರ ಸಂಕಟವೊಂದನ್ನು ನಿರೂಪಿಸಿಕೊಂಡನಂತೆ. ಅವನಿಗೆ ಹುಟ್ಟಿದ ಮಕ್ಕಳೆಲ್ಲ ಸಾಯುವುದು ಒಂದು ಸಂಕಟವಾದರೆ, ಆ ಸಂಕಟ ತಾಳದೆ, ಆತನ ಪತ್ನಿ ಬುದ್ಧಿಭ್ರಮಣೆ ಹೊಂದಿದ್ದು ಮತ್ತೊಂದು ಸಂಕಟವಾಯಿತು. ಗುರುಗಳ ಪ್ರಸಾದ ದೊರೆಯುವುದು ಕಷ್ಟ. ಗುರುಪ್ರಸಾದವಾದ ಮೇಲೆ ಕಾರ್ಯಸಿದ್ಧಿಗೆ ವಿಳಂಬ ಬೇಕಿಲ್ಲ. ಇಲ್ಲಿ ಆದದ್ದೂ ಹಾಗೆಯೇ. ಅವರು ಅನುಗ್ರಹಿಸಿದ ಮಂತ್ರಾಕ್ಷತೆಯ ಪ್ರಭಾವದಿಂದ ಅವಳ ಬುದ್ಧಿ ಸರಿಹೋದದ್ದು ಮಾತ್ರವಲ್ಲದೆ, ದೀರ್ಘಾಯುಷಿಯಾದ ಪುತ್ರನೂ ಜನಿಸಿದ.

೪. ೧೯ನೇ ಶತಮಾನದಲ್ಲಿ ಅಂಜಲಿ ಆಚಾರ್ಯರೆಂಬುವರು ಪಾರ್ಶ್ವವಾಯುವಿಗೆ ಪೀಡಿತರಾದರು. ಅವರು ತಿರುಪತಿಯಲ್ಲಿ ಶ್ರೀನಿವಾಸನನ್ನು ಸೇವಿಸಿ, ತಿರುಕ್ಕೋಯಿಲೂರಿನತ್ತ ಪ್ರಯಾಣ ಬೆಳೆಸಿದರು. ಮಾರ್ಗಮಧ್ಯದಲ್ಲಿ ಅವರಿಗೆ ಪ್ರಾಣಾಪಾಯದ ಸೂಚನೆ ಒದಗಿ, ಭಕ್ತಿಯಿಂದ ಪ್ರಾರ್ಥಿಸಲು ನಿರ್ವಿಘ್ನವಾಗಿ ಪ್ರಯಾಣ ಸಾಗಿ, ಮುಂದೆ ತಿರುಕ್ಕೋಯಿಲೂರನ್ನೂ ಸೇರಿ, ಬೃಂದಾವನ ಸೇವೆಯಿಂದ ಪಾರ್ಶ್ವವಾಯುವಿನಿಂದ ಮುಕ್ತರಾಗಿ, ದೀರ್ಘಕಾಲ ಸಾರ್ಥಕ ಬಾಳನ್ನು ಬಾಳಿದರು.

೫. ಬ್ರಿಟೀಷರ ಕಾಲದಲ್ಲಿ ಅಧಿಕಾರಿಯೊಬ್ಬ ದಕ್ಷಿಣಪಿನಾಕಿನೀ ಸೇತುವೆಯ ವಿಸ್ತರಣೆ ಕಾರ್ಯಕ್ಕಾಗಿ ವೃಂದಾವನದ ಜಾಗವನ್ನು

ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಅವನಿಗೆ ಸ್ವಪ್ನದರ್ಶನವಿತ್ತು, ಆ ಕ್ರಮವನ್ನು ಅಲ್ಲಿಗೇ ನಿಲ್ಲಿಸಲು ಸೂಚಿಸಿದರಂತೆ. ಬೆರಗಾದ ಅವನು ಹಾಗೆಯೇ ಮಾಡಲು ಸಂತತಿಹೀನನಾಗಿದ್ದ ಅವನು ಪುತ್ರಸಂತಾನ ಪಡೆದು ಸುಖಿಯಾದನಂತೆ.

೬. ರಘೂತ್ತಮರನ್ನು ನಿಂದಿಸಿದ ಒಬ್ಬನು ಬಿದ್ದು ನಾಲಿಗೆ ಕತ್ತರಿಸಿಕೊಂಡು ಮೃತ್ಯುಭಯಕ್ಕೆ ತುತ್ತಾಗುವ ಸನ್ನಿವೇಶ ಬಂದಾಗ, ಪಶ್ಚಾತ್ತಾಪ ಪಟ್ಟು, ವೃಂದಾವನದ ಸೇವೆಗೆ ತೊಡಗಲು, ನಾಲಿಗೆ ಪುನ: ಅಂಟಿಕೊಂಡು, ಮುಂಚಿನಂತಾದ ಘಟನೆ ತುಂಬಾ ಪ್ರಸಿದ್ಧವಾದುದು.

**ಆಧಾರ – ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯರ "ಶ್ರೀರಘೂತ್ತಮತೀರ್ಥರು"**

## ರಘೂತ್ತಮರ ಬಗ್ಗೆ ಕೆಲವು ದೇವರನಾಮಗಳು

**ರಾಗ : ಭೈರವಿ ತಾಳ – ಆಟತಾಳ**

ನೋಡಿದೆ । ಗುರುಗಳ ನೋಡಿದೆ । ಪ ।
ನೋಡಿದೆನು ಗುರುಗಳ ಪದಾಬ್ಜವ ।
ಪಾಡಿದೆನು ತನ್ಮಹಿಮೆಗಳ ನಾ
ಬೇಡಿದೆನು ಮನದಣಿಯೆ ವರಗಳ ಈಡು
ಇಲ್ಲದೆ ಕೊಡುವ ಪ್ರಭುಗಳ । ಅ ಪ ।

ಪಂಚಕೃಷ್ಣಾರಣ್ಯಕ್ಷೇತ್ರ ಪಿನಾಕಿನಿಯ ತೀರದಲಿ ನಿಂತು ।
ಮಿಂಚುತಿಹ ಕಾಷಾಯದಂಡಕಮಂಡಲವ ಧರಿಸುತ್ತ ಧರೆಯೊಳು ॥

ಪಂಚಬಾಣನ ಪಿತನ ಗುಣಗಳ ಅಂಚೆಯದೆ ಪೊಗುಳುತ್ತ ಹರುಷದಿ ।
ಸಂಚಿತಾಗಾಮಿಗಳ ಕಳೆದು ಪ್ರಪಂಚದಲಿ ಮೆರೆವಂಥ ಗುರುಗಳ। ೧ ।

ಅಲವಬೋಧರ ಭಾಷ್ಯಟೀಕಾಭಾವವನು ಸುಜನರಿಗೆ ಬೋಧಿಸಿ
ಕಲುಷಮತಗಿರಿ ಸಮುದಯಂಗಳ ಕುಲಿಶದಂದದಿ ಖಂಡಿಸುತಲಿ ॥
ಮೂಲರಾಮ ದಿಗ್ವಿಜಯರಾಮರ ಪಾದಕಮಲಕೆ ಭೃಂಗರೆನಿಸುತ ।
ಶೀಲಭಕ್ತಿ ವಿರಕ್ತಿ ಮತಿಗಳ ಪಾಲಿಸುವ ಯತಿಮೌಳಿರತುನವ ।೨ ।

ಕಾಮಧೇನು ಸುಕಲ್ಪತರು ಚಿಂತಾಮಣಿಯವ್ಪೋಲ್ ಕಾಮಿತಾರ್ಥವ ।
ಪ್ರೇಮದಲಿ ಬೀರುತ್ತ ಆಧ್ಯಾತ್ಮಾದಿ ತಾಪತ್ರಯವ ಕಳೆಯುವ ॥
ಸ್ವಾಮಿ ಶ್ರೀಹರಿ ಶ್ರೀದವಿಟ್ಠಲನ ದಾಸರಗ್ರಣಿಯೆನಿಸಿ ಮೆರೆಯುವ ।
ನೇಮದಿಂದಲಿ ಶ್ರೀರಘೂತ್ತಮ ಮೌನಿವರ್ಯರ ಕರುಣ ಬಯಸುತ ।೩।

ರಾಗ – ಹಿಂದೋಳ ತಾಳ – ಆದಿತಾಳ

ಪಾಹಿ ರಘೂತ್ತಮ ಗುರುರಾಯ
ವಿದ್ಯಾಯು ಯಶಶ್ರೀ ವಿಜ್ಞಾನಪ್ರದಾಯ । ಪ ।
ಪಾಹಿ ಪ್ರಮೋದಾಗಮಾನಂದಿತಾಯ । ದಿಗಧಿಪಾಯ ।
ಗುಣಸಾಗರಾಯ । ಬುಧಗೇಯ । ಅಜೇಯ । ಅ ಪ ।

ರಘುವರ್ಯ ಪಾದಾಬ್ಜ ಮಧುಲಿಡ್ವರ ।
ಅಘಶೈಲ ಮಘವಾನನಘಧೀವರ ।
ನಿಗಮಾಗಮಾನಂತೋದಿತ ಭಾಸ್ಕರ ।
ರಘುವರಾಬ್ಜ ಪದಯುಗಳೇಂದೀವರ
ನಿಗದಿತಾಶುಗಾಶಯ ನಿಶ್ರೇಯ । ೧ ।

ನತಕಲ್ಪದ್ರುಮ ಸಿದ್ಧ ನಿಕಶಾತ್ಮಜ ।
ಶಿತಿಕಂಠಯುತನೀತ ವಾತಾತ್ಮಜ ।
ಯತಿವರ್ಯಾನ್ವಿತ ತತ್ವಕ್ರತು ಋತ್ವಿಜ ॥
ಕ್ಷಿತ್ಯಮೃತಾಂಧಸಸತ್ತಮ ದಕ್ಷಿಣ ।
ಚಿತ್ತಜಾರಿಧುನಿ ನಿತ್ಯವಿಹಾರಿ । ೨ ।

ನಿರವದ್ಯ ಸುಖಭಾವಭೋದಾತ್ಮಕ ।
ಸಿರಿತಂದೆ ವೆಂಕಟೇಶವಿಟ್ಠಲಾರ್ಚಕ ।
ಸ್ಮರ ಸಂವತ್ಸರ ಪುಷ್ಯ ಶುಕ್ಲಾಧಿಕ ॥
ಸ್ವರ್ದಿನಾಭ್ರಪುರ ನಿರ್ಗಮನೋತ್ಸುಕ
ದುರ್ಗಮ ಭವ ಸಂಸರ್ಗವಿದಾರಕ ॥ ೩ ॥

www.sumadhwaseva.com